# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.47(ಡಿ.ಜೆ ಹಳ್ಳಿ)
## ವಾರ್ಡ್ ಸಮಿತಿ ಸಭೆ, ದಿನಾಂಕ: 03-09-2022 ರ ಸಭಾ ನಡವಳಿ

ಸಂಖ್ಯೆ:ಸ.ಕಾನಿ.ಅ (ಪು.ನ)/ಪಿಆರ್/10/22-23

ದಿನಾಂಕ: 03-09-2022 ರಂದು ಮಧ್ಯಾಹ್ನ 12.00 ಗಂಟೆಗೆ ವಾರ್ಡ್ ನಂ. 47-ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಡಿ.ಜೆ ಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1. | S. Vishwanatha | Nodal Officer ward No. 47- D J Halli & Asst. Executive Engineer, J.C Nagar Sub-division |
| 2. | Sri Yuvakumar | Asst Engineer (Ward NO.47) |
| 3. | Sri Nagaraj | Tax Inspector |
| 4. | Smt.Suguna | Tax Inspector |
| 5. | Sri Chandrashekar | Horticulture Inspector |
| 6. | Sri Ragavendra | PSI D J Halli Police Station |
| 7. | Sri Mohammed Ibrahim | BWSSB |
| 8. | Sri. N Ganesh | BESCOM |
| 9. | Sri.Saifulla | Street Light |
| 10. | Sri. Madhu M | Junior Health Inspector |
| 11. | Sri.Kanchana | BBMP Link Worker |
| 12. | Sri.Mahesh Kumar. M | Sanitary Dhafedhar |
| 13. | Sri Pradeep S | Marshal BBMP |
| 14. | Sri Rajan D | Marshal BBMP |
| 15. | Sri Arvindan M | Marshal BBMP |
| 16. | Sri.Purushotham | Ward Committee Member |
| 17. | Sri Suresh | Ward Committee Member |
| 18. | Sri Mani Maran | Ward Committee Member |
| 19. | Sri Suresh A R | Ward Committee Member |
| 20. | Sri Gopinath | Ward Committee Member |
| 21. | Sri Syed Ansar Pasha | Ward Committee Member |

ಶ್ರೀ. ಎಸ್.ವಿಶ್ವನಾಥ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆ.ಸಿ ನಗರ ಉಪ ವಿಭಾಗ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು (ನೋಡಲ್ ಅಧಿಕಾರಿ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

ದಿನಾಂಕ : 22-08-2022 ರಂದು ನಡೆದ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.

1. ಈ ಹಿಂದಿನ ಸಭೆಯಲ್ಲಿ ದಿನಾಂಕ: 22-08-2022 ರಂದು ನಡೆದ ಸಭೆಯಲ್ಲಿ ಮೋದಿ ಗಾರ್ಡನ್ ಬಡಾವಣೆಯ 3ನೇ ಅಡ್ಡರಸ್ತೆಯ ಹಿಂಬಾಗದ ಕಾವಲ್‌ಬೈರಸಂದ್ರದ ರಕ್ಷಣಾ ಇಲಾಖೆಯ ಆವರಣದಿಂದ ಕಾವಲ್‌ಬೈರಸಂದ್ರ ಮೋದಿ ಗಾರ್ಡನ್ ವರೆಗೆ ಮಳೆ ನೀರು ಹರಿದುಬರುತ್ತಿರುವ ಬಗ್ಗೆ ಈಗಾಗಲೇ ಸಂಬಂಧಪಟ್ಟ ರಕ್ಷಣಾ ಇಲಾಖೆರವರಿಗೆ ಪತ್ರ ಬರೆದಿದ್ದು, ಅವರ ವತಿಯಿಂದಲೇ ಕಾಂಕ್ರೀಟ್ ಚರಂಡಿಯನ್ನು ನಿರ್ಮಿಸಿ ಕೊಂಡು ಮಳೆಯ ನೀರು ಸಾರ್ವಜನಿಕ ಪ್ರದೇಶಗಳಿಗೆ ನುಗ್ಗದಂತೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

Scanned with CamScanner

2. ವಾರ್ಡ್ ವ್ಯಾಪ್ತಿಯಲ್ಲಿ ಚರ್ಚಿಸಲಾದಂತೆ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸಿರುವವರ ವಿರುದ್ಧ ಕ್ರಮಕೈಗೊಳ್ಳುವಂತೆ ಕಿರಿಯ ಅಭಿಯಂತರರಿಗೆ ಸೂಚಿಸಲಾಗಿದ್ದು, ಅದಂತೆ ಈಗಾಗಲೇ ಸಂಚಾರ ಪೋಲೀಸ್ ಠಾಣೆರವರಿಗೆ ಪತ್ರ ಬರೆಯಾಗಿರುತ್ತದೆ ಎಂದು ವಾರ್ಡಿನ ಕಿರಿಯ ಅಭಿಯಂತರರು ತಿಳಿಸಿರುತ್ತಾರೆ.

3. ಅಂಬೇಡ್ಕರ್ ಪಾರ್ಕಿನಲ್ಲಿ ಮತ್ತು ಸುತ್ತಮುತ್ತಲ್ಲಿನ ಪ್ರದೇಶದಲ್ಲಿ ಈಗಾಗಲೇ ಪ್ರತಿ ನಿತ್ಯ ಘನ ತ್ಯಾಜ್ಯವನ್ನು ತೆರವು ಗೊಳಿಸಲಾಗಿರುತ್ತಿರುದೆಂದು ವಾರ್ಡಿನ ಕಿರಿಯ ಆರೋಗ್ಯ ನಿರೀಕ್ಷರಾದ ಶ್ರೀ.ಎಂ ಮದು. ರವರು ಘನತ್ಯಾಜ್ಯ ಭಾಗಶಃ ತೆರವುಗೊಳಿಸಲಾಗಿರುತ್ತದೆ. ಇನ್ನು ಉಳಿದ ಕಟ್ಟಡದ ಘನತ್ಯಾಜ್ಯ ಹಾಗೂ ಇನ್ನಿತರೇ ತ್ಯಾಜ್ಯಗಳನ್ನು ತೆರವುಗೊಳಿಸುವಂತೆ ವಾರ್ಡಿನ ಕಿರಿಯ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

4. ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರಿಂಗ್ ಸಿಬ್ಬಂಧಿಗಳ ವಿವರಗಳನ್ನು ಹಾಗೂ ದೂರವಾಣಿ ಸಂಖ್ಯೆಗಳನ್ನು ಕಛೇರಿಯಲ್ಲಿ ಸಾರ್ವಜನಿಕರಿಗೆ ತಿಳಿಯುವಂತೆ ಸೂಚನಾ ಫಲಕದಲ್ಲಿ ಅಳವಡಿಸಲು ವಾರ್ಡಿನ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

5. ವಾರ್ಡ್ 47 ರ ವ್ಯಾಪ್ತಿಗೆ ಒಳಪಡುವ ಮುನಿಮಾರಪ್ಪ ಗಾರ್ಡನ್ ಕಾರ್ಲಿನ್ ಎಂಬುವವರು ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಈ ಕಟ್ಟಡಕ್ಕೆ ಸಂಬಂಧಪಟ್ಟಂತೆ ಕ್ರಮಕೈಗೊಂಡ ವಿವರಗಳನ್ನು ನೀಡುವಂತೆ ವಾರ್ಡಿನ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

6. ವಾರ್ಡ್‌ನ ವ್ಯಾಪ್ತಿಗೆ ಒಳಪಡುವ ಇಂದಿರಾಪುರ, ಮೋದಿ ಗಾರ್ಡನ್ ರಸ್ತೆಯಲ್ಲಿರುವ ಬೀದಿ ದೀಪಗಳು ದುರಸ್ಥಿಗೊಂಡಿದ್ದು, ಬೀದಿ ದೀಪಗಳ ನಿರ್ವಹಣೆಗಾರರಾದ ಶ್ರೀ.ಸೈಫುಲ್ಲಾ ರವರಿಗೆ ದುರಸ್ಥಿಯನ್ನು ಸರಿಪಡಿಸಲು ಸಭೆಯಲ್ಲಿ ತಿಳಿಸಲಾಗಿದೆ.

7. ಬೆಸ್ಕಾಂ ವತಿಯಿಂದ ಉರ್ದು ಶಾಲೆಯ ಬಳಿ ಅಳವಡಿಸಲಾಗಿರುವ Single Pole PC ಆಳವಡಿಸಿರುವ ಜಾಗದಲ್ಲಿ ಹೆಚ್ಚು ಮಣ್ಣನ್ನು ತೆರವುಗೊಳಿಸಿ ಸಮತಟ್ಟು ಮಾಡಿ ಕ್ರಮ ಕೈಗೊಳ್ಳಲು ಶ್ರೀ.ಎನ್.ಗಣೇಶ್ ಕಿರಿಯ ಅಭಿಯಂತರರು, ಬೆಸ್ಕಾಂ ರವರಿಗೆ ಸೂಚಿಸಲಾಗಿದೆ.

8. ವಾರ್ಡಿನ ವ್ಯಾಪ್ತಿಗೆ ಒಳಪಡುವ ತಂಗಮಲೈನಗರ ಚಂದ್ರಶೇಖರ್ ಶಾಲೆಯ ಹತ್ತಿರ ವಿದ್ಯುತ್ ಕಂಬ ಅಳವಡಿಸಲು ಹಾಗೂ ಬೀದಿ ದೀಪಗಳನ್ನು ಅಳವಡಿಸಲು Mother Foundation S.Rajan ತಿಳಿಸಿದ್ದು, ಸಂಬಂಧಪಟ್ಟ ಶ್ರೀ.ಎನ್.ಗಣೇಶ್ ಕಿರಿಯ ಅಭಿಯಂತರರು, ಬೆಸ್ಕಾಂ ರವರಿಗೆ ಸೂಚಿಸಲಾಗಿದೆ.

ಸಹಿ
(ಎಸ್.ವಿಶ್ವನಾಥ)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಮೋದಿ ಗಾರ್ಡನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ರವರಿಗೆ.
11. ನಾಗರೀಕ ಹಕ್ಕುಗಳ ರಕ್ಷಣೆ ವೇದಿಕೆ ರವರಿಗೆ.
12. ವಾರ್ಡ್ ವ್ಯಾಪ್ತಿಯ ಎಲ್ಲಾ ವೇಲ್‌ಫೇರ್ ಅಸೋಷಿಯನ್ಸ್ ರವರಿಗೆ.
13. ಕಛೇರಿ ಕಡತಕ್ಕೆ.

Scanned with CamScanner